# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಹೆಚ್ಚುವರಿ ನಿರ್ದೇಶಕರು(ನಗರ ಯೋಜನೆ) ರವರ ಕಛೇರಿ,ಮಹಾನಗರ ಪಾಲಿಕೆ,ಎನ್.ಆರ್. ವೃತ್ತ,ಬೆಂಗಳೂರು-02.**

O/o Joint Director Town Planning (South)

ಸಂಖ್ಯೆ: ಜೆಡಿಟಿಪಿ (ದ)/ಪ್ರಾ.ಪ/ಸನಿ/22/2017-18 ದಿನಾಂಕ: 08-09-2017.

## ಪ್ರಾರಂಭಿಕ ಪ್ರಮಾಣ ಪತ್ರ

**ವಿಷಯ:** ಖಾತಾ ಸಂಖ್ಯೆ 128/93, ಆಲಹಳ್ಳಿ ಗ್ರಾಮ, ಉತ್ತರಹಳ್ಳಿ ಹೋಬಳಿ, ಬೊಮ್ಮನಹಳ್ಳಿ ವಲಯ, ವಾರ್ಡ್ ಸಂಖ್ಯೆ 196, ಬೆಂಗಳೂರು ಇಲ್ಲಿ ನಿರ್ಮಿಸಲಾಗುತ್ತಿರುವ ವಸತಿ ಸಮುಚ್ಚಯ ಕಟ್ಟಡಕ್ಕೆ ಪ್ರಾರಂಭಿಕ ಪ್ರಮಾಣ ಪತ್ರ ನೀಡುವ ಬಗ್ಗೆ.

**ಉಲ್ಲೇಖ:** 1) ನಕ್ಷೆ ಮಂಜೂರಾತಿ ಸಂಖ್ಯೆ: BBMP/Addl.Dir/JD South/ 0032/16-17 ದಿನಾಂಕ: 31-01-2017.

2) ಅರ್ಜಿದಾರರ ಮನವಿ ದಿನಾಂಕ: 04-09-2017.

3) ಅಪರ ನಿರ್ದೇಶಕರು, ನಗರ ಯೋಜನೆ ರವರ ಆದೇಶ ದಿನಾಂಕ: 08-09-2017.

*****

ಆಲಹಳ್ಳಿ ಗ್ರಾಮ, ಉತ್ತರಹಳ್ಳಿ ಹೋಬಳಿ, ಬೊಮ್ಮನಹಳ್ಳಿ ವಲಯ, ವಾರ್ಡ್ ಸಂಖ್ಯೆ 196 ರಲ್ಲಿರುವ ಖಾತಾ ಸಂಖ್ಯೆ 128/93 ಇಲ್ಲಿ ನಿರ್ಮಿಸುತ್ತಿರುವ 2ತಳ+ನೆಲ+ಮೇಲಿನ 15 ಅಂತಸ್ತುಗಳ 256 ಘಟಕಗಳುಳ್ಳ ವಸತಿ ಸಮುಚ್ಚಯ ಕಟ್ಟಡಕ್ಕೆ ಈ ಕಛೇರಿಯಿಂದ ಎಲ್.ಪಿ ಸಂಖ್ಯೆ: BBMP/Addl.Dir/JD South/ 0032/16-17 ದಿನಾಂಕ: 31-01-2017 ರಂದು ನಕ್ಷೆ ಮಂಜೂರಾತಿ ನೀಡಲಾಗಿದೆ. ಕಟ್ಟಡದ ಪ್ರಾರಂಭಿಕ ಪ್ರಮಾಣ ಪತ್ರ ನೀಡುವ ಸಲುವಾಗಿ ಕಟ್ಟಡದ ಸ್ಥಳವನ್ನು ದಿನಾಂಕ: 05-09-2017 ರಂದು ಉಪ ನಿರ್ದೇಶಕರು, ಸಹಾಯಕ ನಿರ್ದೇಶಕರು ಮತ್ತು ಸಹಾಯಕ ಅಭಿಯಂತರರವರೊಂದಿಗೆ ಸ್ಥಳ ಪರಿಶೀಲಿಸಿದ್ದು, ವಲಯ ನಿಯಮಾವಳಿಯಂತೆ ಅಗತ್ಯ ನಡುಜಾಗಗಳನ್ನು ಬಿಟ್ಟು ಆರ್.ಸಿ.ಸಿ ಕಂಬಗಳನ್ನು ಅಳವಡಿಸಿರುತ್ತಾರೆ. ಪ್ರಾರಂಭಿಕ ಪ್ರಮಾಣ ಪತ್ರಕ್ಕೆ ಅಗತ್ಯ ಶುಲ್ಕವಾದ ರೂ. 4,47,000/- ಗಳನ್ನು ಅರ್ಜಿದಾರರು ರಸೀದಿ ಸಂಖ್ಯೆ: RE-ifms624-TP/000180 ದಿನಾಂಕ: 08-09-2017 ರಂದು ಭರಿಸಿದ್ದು, ಸಂದಾಯಿಸಿ ಕೊಳ್ಳಲಾಗಿದೆ. ವಸತಿ ಸಮುಚ್ಚಯ ಕಟ್ಟಡಕ್ಕೆ ಪ್ರಾರಂಭಿಕ ಪ್ರಮಾಣ ಪತ್ರವನ್ನು ಈ ಕೆಳಕಂಡ ಷರತ್ತಿಗೊಳಪಡಿಸಿ ನೀಡಲಾಗಿದೆ.

1) ಕಟ್ಟಡ ಕಾಮಗಾರಿಯನ್ನು ಮಂಜೂರಾತಿ ನಕ್ಷೆಯಂತೆ ನಿಯಮಾನುಸಾರ ನಿರ್ಮಿಸತಕ್ಕದ್ದು.
2) ಕಟ್ಟಡ ನಿರ್ಮಾಣದ ಪ್ರಗತಿಯನ್ನು ಕಾಲಾನುಸಾರ ಸಂಬಂಧಪಟ್ಟ ಕಛೇರಿಗೆ ಮಾಹಿತಿಯನ್ನು ನೀಡಿ ಮಂಜೂರಾತಿ ನಕ್ಷೆಯಂತೆ ನಿರ್ಮಿಸುತ್ತಿರುವ ಬಗ್ಗೆ ಪರಿವೀಕ್ಷಣೆಗೆ ಒಳಪಡಿಸತಕ್ಕದ್ದು.
3) ಕಟ್ಟಡ ನಿರ್ಮಾಣದ ಸ್ಥಳದಲ್ಲಿ ಅಕ್ಕ-ಪಕ್ಕದವರಿಗೆ ತೊಂದರೆಯಾಗದಂತೆ ಹಾಗೂ ಕೆಲಸಗಾರರಿಗಾಗಿ ಶೆಡ್ ಮತ್ತು ತಾತ್ಕಾಲಿಕ ಶೌಚಾಲಯಗಳನ್ನು ನಿರ್ಮಿಸತಕ್ಕದ್ದು.
4) ಉದ್ಯಾನವನ ಮತ್ತು ಬಯಲುಜಾಗದ ಶುಲ್ಕದ ಬಾಬ್ತು ಮಾನ್ಯ ಸರ್ವೋಚ್ಛ ನ್ಯಾಯಾಲಯದ ಅಂತಿಮ ತೀರ್ಪಿಗೆ ಬದ್ಧರಾಗಿರುವುದಾಗಿ ನೀಡಿರುವ ಮುಚ್ಚಳಿಕೆ ಪತ್ರದಂತೆ ಷರತ್ತನ್ನು ಪಾಲಿಸತಕ್ಕದ್ದು.

8/9/17

ಜಂಟಿ ನಿರ್ದೇಶಕರು, ನಗರ ಯೋಜನೆ (ದಕ್ಷಿಣ)
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

8/9 8/9 8/9/17

ಗೆ

Smt. C.V. Jayaram & Others
GPA Holder for M/s. Vaishnavi Infrastructure Pvt. Ltd.,
Rep by Sai Prasad PA
# 128/93, ಆಲಹಳ್ಳಿ ಗ್ರಾಮ, ಉತ್ತರಹಳ್ಳಿ ಹೋಬಳಿ,
ಬೊಮ್ಮನಹಳ್ಳಿ ವಲಯ, ವಾರ್ಡ್ ಸಂಖ್ಯೆ 196, ಬೆಂಗಳೂರು.